## ಕೈಗಳ ಕಸಿಯ ಇನ್ನಷ್ಟು ಉದಾಹರಣೆಗಳು ಇಲ್ಲಿವೆ

- ಕೇರಳದ ಎರ್ನಾಕುಲಂನ ಸಚಿನ್ ರಸ್ತೆ ಅಪಘಾತದಲ್ಲಿ ತೀವ್ರ ಗಾಯಗೊಂಡು ಮೆದುಳು ನಿಷ್ಕ್ರಿಯವಾಗಿತ್ತು. ಇವರ ಕೈಗಳನ್ನು ಪುಣೆಯ ಎಂಜಿನಿಯರಿಂಗ್ ಪದವೀಧರೆ ಶ್ರೇಯಾ ಅವರಿಗೆ ಕಸಿ ಮಾಡಲಾಗಿತ್ತು. ಶ್ರೇಯಾ 2018ರಲ್ಲಿ ಮಣಿಪಾಲದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಪುಣೆಯಿಂದ ಮಣಿಪಾಲಕ್ಕೆ ಹೋಗುವ ರಸ್ತೆಯಲ್ಲಿ ಅಪಘಾತಕ್ಕೀಡಾಗಿ ಎರಡು ಕೈಗಳನ್ನೂ ಕಳೆದುಕೊಂಡಿದ್ದರು. 2018ರಲ್ಲಿ ಕೊಚ್ಚಿಯ ಅಮೃತಾ ವೈದ್ಯವಿಜ್ಞಾನ ಸಂಸ್ಥೆಯ ವೈದ್ಯರು ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದರು. ಯುವಕನ ಕೈಗಳನ್ನು ಯುವತಿಗೆ ಜೋಡಿಸಿದ ಪ್ರಕರಣ ಭಾರತದಲ್ಲೇ ಅತ್ಯಂತ ಅಪರೂಪದ್ದು ಎಂದು ದಾಖಲಾಯಿತು.

- ಸೂರತ್‌ನ 67ರ ಹರೆಯದ ಕನು ವಶ್ರಂಭಾಯಿ ಪಟೇಲ್ ಅವರು ಇದೇ ವರ್ಷದ ಜನವರಿ 18ರಂದು ಪಾರ್ಶ್ವವಾಯುವಿಗೆ ತುತ್ತಾಗಿ ಅವರ ಮೆದುಳು ನಿಷ್ಕ್ರಿಯಗೊಂಡಿತ್ತು. ಮಹಾರಾಷ್ಟ್ರದ 35 ವರ್ಷದ ಮಹಿಳೆ ಮೂರು ವರ್ಷದ ಹಿಂದೆ ಬಟ್ಟೆ ಒಣಗಲು ಹಾಕುವಾಗ ವಿದ್ಯುತ್ ತಗುಲಿ ಎರಡೂ ಕೈಗಳನ್ನು ಕಳೆದುಕೊಂಡಿದ್ದರು. ಮುಂಬಯಿಯ ಗ್ಲೋಬಲ್ ಆಸ್ಪತ್ರೆಯಲ್ಲಿ ಪಟೇಲ್ ದಾನ ಮಾಡಿದ ಎರಡು ಕೈಗಳನ್ನು ಈ ಮಹಿಳೆಗೆ ಯಶಸ್ವಿಯಾಗಿ ಜೋಡಣೆ ಮಾಡಲಾಗಿದೆ.

- ನ್ಯೂಯಾರ್ಕ್‌ನಲ್ಲಿ ಫೆಬ್ರುವರಿ 2021ರಂದು 22 ವರ್ಷದ ಯುವಕನಿಗೆ ಕೈ ಕಸಿ ಮಾಡಲಾಗಿತ್ತು. ಕಾರು ಅಪಘಾತದಲ್ಲಿ ಡಿಮಿಯೊ ಎಂಬ ಯುವಕನ ಮುಖ ಹಾಗೂ ಕೈಗಳು ಸುಟ್ಟುಹೋಗಿದ್ದವು. ಈತನಿಗೆ ಅಂಗಾಂಗ ದಾನಿಯಿಂದ ಪಡೆದ ಕೈಗಳನ್ನು ಯಶಸ್ವಿಯಾಗಿ ಕಸಿ ಮಾಡಲಾಗಿದೆ.

- ಪ್ಯಾರಿಸ್‌ನಲ್ಲಿ 2009ರಲ್ಲಿ ಮೊದಲ ಬಾರಿಗೆ ಕೈ ಕಸಿ ಮಾಡಲಾಗಿತ್ತು.

- ಜಗತ್ತಿನ ನಾನಾ ದೇಶಗಳಲ್ಲಿ ಕೈಗಳ ಕಸಿ ನಡೆದಿದೆ. ನಮ್ಮ ದೇಶದಲ್ಲಿ ಈವರೆಗೆ ಸುಮಾರು 60 ಮಂದಿಗೆ ಕೈ ಕಸಿ ನಡೆದಿದೆ.

ಮಾಡಲು ಅವುಗಳನ್ನು ಬಗ್ಗಿಸಿ ಸರಿಯಾದ ಆಕಾರಕ್ಕೆ ತರಬೇಕಿತ್ತು. ಇದರ ಜೊತೆಗೆ ರಕ್ತ ಕೊರತೆಯ ಸಮಯವನ್ನು (ಇಸ್ಕೇಮಿಯಾ ಟೈಂ) ಕಡಿಮೆ ಮಾಡುವುದಾಗಿತ್ತು. ಇದು ದಾನಿಗಳಿಂದ ಕೈಯನ್ನು ಬೇರ್ಪಡಿಸಿ ಶೀತಲೀಕರಣದಲ್ಲಿಟ್ಟು ಬಳಿಕ ರೋಗಿಗೆ ಜೋಡಿಸಿ ಮತ್ತೆ ಬೆಚ್ಚಗಾಗಿಸುವ ನಡುವಿನ ಅವಧಿಯಾಗಿದೆ. ಆ ಬಳಿಕ ನರಗಳು ಮತ್ತು ಸ್ನಾಯುಗಳನ್ನು ಸರಿಪಡಿಸಲಾಗಿದ್ದು ಕೊನೆಯಲ್ಲಿ ಚರ್ಮವನ್ನು ಯಥಾವತ್ತಾಗಿ ಇರಿಸಿ ಶಸ್ತ್ರಚಿಕಿತ್ಸೆಯನ್ನು ಪೂರ್ಣಗೊಳಿಸಲಾಯಿತು' ಎಂದು ವಿವರ ನೀಡುತ್ತಾರೆ ಕೊಚ್ಚಿಯ ಅಮೃತಾ ಆಸ್ಪತ್ರೆಯ ಸೆಂಟರ್ ಫಾರ್ ಪ್ಲಾಸ್ಟಿಕ್ ಆ್ಯಂಡ್ ರಿಕನ್ಸ್ಟ್ರಕ್ಟಿವ್ ಸರ್ಜರಿ ವಿಭಾಗದ ಮುಖ್ಯಸ್ಥರಾದ ಡಾ. ಮೋಹಿತ್ ಶರ್ಮಾ,



ಸರ್ಜರಿ ಬಳಿಕ ಬಸವಣ್ಣ;
ಒಳಚಿತ್ರ ಕೈಗಳ ದಾನಿ ನೇವಿಸ್

'ಈ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ನಡೆದಿದ್ದು, ಸರ್ಜರಿಯಾದ ಬಳಿಕ ಕೆಲ ವಾರದಲ್ಲಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಅವರೀಗ ನಿತ್ಯವೂ ಫಿಸಿಯೊಥೆರಪಿ ಮಾಡಿಸಿಕೊಳ್ಳಬೇಕಿದೆ. ಇದರೊಂದಿಗೆ ಹೊಸ ಕೈಗಳ ಪ್ರಚೋದನೆ ಮತ್ತು ಕೈಗಳ ಕೆಲಸದ ಗುಣಮಟ್ಟವನ್ನು ಸುಧಾರಿಸಲು ಚಿಕಿತ್ಸೆಯನ್ನು ಪಡೆಯಬೇಕು. ಅದಾಗಿ ಅವರು ಸ್ನಾಯುಗಳನ್ನು ಬಲಪಡಿಸುವ ವ್ಯಾಯಾಮ ಮಾಡಬೇಕು' ಎಂದು ಹೇಳುತ್ತಾರೆ ಇದೇ ಆಸ್ಪತ್ರೆಯಲ್ಲಿ ಸರ್ಜರಿ ವಿಭಾಗದ ಮುಖ್ಯಸ್ಥರಾಗಿರುವ ಡಾ. ಸುಬ್ರಮಣಿ ಅಯ್ಯರ್.

'ಕಸಿ ಮಾಡಿದ ಕೈಗಳು ಚೆನ್ನಾಗಿ ಕಾರ್ಯನಿರ್ವಹಿಸಲು ಸಮರ್ಥ ಆಗುವವರೆಗೂ ವಿವಿಧ ಚಿಕಿತ್ಸೆಗಳನ್ನು ಪಡೆಯುವುದು ಅನಿವಾರ್ಯ. ಅಲ್ಲದೆ ಜೊತೆಗೆ ಕಸಿ ಮಾಡಿದ ಕೈಗಳನ್ನು ದೇಹವು ತಿರಸ್ಕರಿಸುವುದನ್ನು ತಡೆಯಲು ರೋಗಿಯು ಜೀವಮಾನವಿಡೀ ಔಷಧವನ್ನು ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳುತ್ತಾರೆ ಈ ವೈದ್ಯರು. ■

## 'ಜೀವ ಸಾರ್ಥಕತೆ'

ರಾಜ್ಯದಲ್ಲಿ ಅಂಗ ಕಸಿ ಕಾರ್ಯಕ್ರಮಕ್ಕಾಗಿ 'ಜೀವ ಸಾರ್ಥಕತೆ' ಎಂಬ ಸಂಸ್ಥೆ ರಚಿಸಿದ್ದು, ದಾನಿಗಳು ಇಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಇದು 1994ರ ಮಾನವ ಅಂಗಾಂಶ ಕಸಿ ಕಾಯಿದೆಯ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಚಿಸಲಾಗಿದೆ. ಮೃತ ದಾನಿಯ ಅಂಗ ಕಸಿ ಸಮನ್ವಯತೆ ಮತ್ತು ಅಂಗಾಂಗ ದಾನದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶ.

ನಮ್ಮಲ್ಲಿ ಅಂಗಾಂಗ ದಾನ ಮಾಡುವವರ ಸಂಖ್ಯೆ ಏರುತ್ತಿದ್ದರೂ ಅಪೇಕ್ಷಿತರ ಸಂಖ್ಯೆ ಇದಕ್ಕಿಂತ ಎರಡರಷ್ಟು ಹೆಚ್ಚಾಗಿದೆ. ಹೀಗಾಗಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಇನ್ನೂ ತ್ವರಿತವಾಗಬೇಕಾಗಿದೆ.

'ಜೀವ ಸಾರ್ಥಕತೆ'ಯೋಜನೆಯಡಿ ನೋಂದಣಿ ಮಾಡಿದ ರೋಗಿಗೆ ಸಂಸ್ಥೆಯೇ ಅಂಗಾಂಗ ಸರದಿಯಂತೆ ನೀಡುತ್ತಿದೆ. ಅಪಘಾತ ಮತ್ತಿತರ ಕಾರಣಗಳಿಂದ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿ ದಾನ ಮಾಡಲು ಸಾಧ್ಯವಿರುವ ಎಲ್ಲ ಅಂಗಾಂಗ ದಾನ ಮಾಡಿದರೆ ಎಂಟರಿಂದ ಹತ್ತು ರೋಗಿಗಳ ಜೀವ ಉಳಿಸಬಹುದು.

ಅಪಘಾತದಿಂದ ಮೆದುಳು ನಿಷ್ಕ್ರಿಯಗೊಂಡರೆ ಆ ವ್ಯಕ್ತಿಯ ಇತರ ಅಂಗಾಂಗಗಳು ಸಮರ್ಥವಾಗಿಯೇ ಇರುತ್ತವೆ. ಹೃದಯ, ಕಿಡ್ನಿ, ಕಣ್ಣು, ಪಿತ್ತಜನಕಾಂಗ, ರಕ್ತನಾಳ, ಸಣ್ಣ ಕರುಳು, ಮೇದೋಜೀರಕ ಗ್ರಂಥಿ, ಅಂಡಾಣು, ಶ್ವಾಸಕೋಶ, ಕೈಗಳು, ಕಾಲುಗಳು ಮುಂತಾದ ಅಂಗಗಳನ್ನು ದಾನ ಮಾಡಬಹುದು.

ಇತ್ತೀಚೆಗೆ ಕೋಲಾರದ ಚಿಂತಾಮಣಿಯ ನವವಧು ಆರತಕ್ಷತೆ ವೇಳೆ ಕುಸಿದು ಬಿದ್ದು ಮೆದುಳು ನಿಷ್ಕ್ರಿಯಗೊಂಡಿದ್ದು, ಈಕೆಯ ಹೆತ್ತವರು ತಕ್ಷಣ ಆ ನೋವಿನಲ್ಲೂ ಮಗಳ ಅಂಗಾಂಗ ದಾನ ಮಾಡಿ ಸಾರ್ಥಕತೆ ಮೆರೆದರು. ಚಿಕ್ಕಮಗಳೂರಿನ 22 ವರ್ಷದ ಸ್ಟಾಫ್ ನರ್ಸ್ ಕರ್ತವ್ಯ ನಿರ್ವಹಿಸುತ್ತಿದ್ದಾಗಲೇ ಆಕಸ್ಮಿಕ ಮರಣವನ್ನಪ್ಪಿದ್ದು, ಈಕೆಯ ಅಂಗಾಂಗಗಳನ್ನೂ ದಾನ ಮಾಡಲಾಯಿತು. ನಟ ಸಂಚಾರಿ ವಿಜಯ್ ಅಪಘಾತದಲ್ಲಿ ತಲೆಗೆ ತೀವ್ರ ಗಾಯಗೊಂಡು ವೈದ್ಯರು ಬ್ರೈನ್ ಡೆಡ್ ಎಂದು ಘೋಷಿಸಿದ ಬಳಿಕ ಈತನ ಅಂಗಾಂಗ ದಾನ ಮಾಡಲಾಯಿತು.

'ಜೀವ ಸಾರ್ಥಕತೆ' ಕಚೇರಿ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಆರೋಗ್ಯ ಸೌಧದಲ್ಲಿದೆ.

**ಸಂಪರ್ಕ ಸಂಖ್ಯೆ** 080-26295636